**ದಿನಾಂಕಃ 28.11.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

## ಪಾಟೀಸವಾಲುಃ 2 ರಿಂದ 6 ನೇ ಪ್ರತಿವಾದಿಪರ ವಕೀಲರಾದ ಶ್ರೀ ಬಿ.ಎಸ್.ವೈ. ಅವರಿಂದ–

1. ನಾನು ವ್ಯವಸಾಯ ಮಾಡುತ್ತೇನೆ. ನನಗೆ ಮಾಣಿಕ್ಯಪುರದಲ್ಲಿ 4 ಎಕರೆ ಜಮೀನು ಇದೆ. ನಾನು ಎಮ್.ಎ. ಪದವಿಧರ. ನನ್ನ ಜನ್ಮ ದಿನಾಂಕಃ12.04.1969. ದಿಃ 19.03.1958 ರಲ್ಲಿ ರಿಜಿಸ್ಟರ್ಡ್ ಭೋಗ್ಯ ಪತ್ರ ಮಾಡಿದ್ದರು ಎಂದು ಹೇಳುವ ದಿನಾಂಕ ನಾನು ಜನಿಸಿರಲಿಲ್ಲ. 1958 ರ ವಿಚಾರಗಳು ಪೂರ್ಣ ನನಗೆ ಗೊತ್ತಿಲ್ಲ.

2. ಪ್ರಸ್ತುತ ದಾವೆಯಲ್ಲಿ ವಾದಿಗಳ ಪೂರ್ಣ ಹೆಸರು ವಿಳಾಸ ನನಗೆ ಗೊತ್ತಿಲ್ಲ. ನನಗೆ ಶಿವಪ್ಪ, ಸ್ವಾಮಿ ಹಾಗೂ ನವೀನ್ ಅವರ ಕುಟುಂಬ ಗೊತ್ತು. 1 ನೇ ವಾದಿ ನವೀನ್ ಅವರ ಕುಟುಂಬ ಬಗ್ಗೆ ಪ್ರಸ್ತುತ ದಾವೆಯ ನೋಟೀಸ್ ಬಂದಾಗ ನನಗೆ ಗೊತ್ತಾಗಿರುತ್ತದೆ. ಅದಕ್ಕೆ ಮುಂಚೆ ನನಗೆ ಗೊತ್ತಿರಲಿಲ್ಲ.

3. ನನಗೆ ಸದರಿ ದಾವೆಯ ಪ್ರತಿವಾದಿಗಳು ಗೊತ್ತು. ಅವರ ಹೆಸರು ರಾಮಚಂದ್ರೇಗೌಡ, ದಿವ್ಯಾನಂದ , ಬಿ.ಕೆ. ರಾಜು, ಹರೀಶ್ ಶಣೈ ಉಳಿದ ಪ್ರತಿವಾದಿಗಳು ನನಗೆ ಗೊತ್ತಿಲ್ಲ. ಹರೀಶ್ ಶಣೈ ಅವರು ಈ ದಾವೆಯಲ್ಲಿ ಪ್ರತಿವಾದಿ ಅಲ್ಲ ಎಂದರೆ ದಿಯಾ ಇನ್ ಫೊಟೆಕ್ ಗೆ ಅವರು ಡೈರೆಕ್ಟರ್ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ನಾನು ಹೇಳಿದ ರಾಮಚಂದ್ರೇಗೌಡ ಅವರು ಪ್ರಸ್ತುತ ದಾವೆಯಲ್ಲಿ ಪ್ರತಿವಾದಿ ಎಂದು ನಮೂದಾಗಿಲ್ಲ ಎಂದರೆ ಅವರು ಸಹ ಡೈರೆಕ್ಟರ್ ಎಂದು ಸಾಕ್ಷಿ ನುಡಿಯುತ್ತಾರೆ.

4. ಪ್ರಸ್ತುತ ದಾವೆಯ ಶಿರೋನಾಮೆಯಲ್ಲಿ ಸದರಿ ರಾಮಚಂದ್ರೇಗೌಡ ಅವರ ಹೆಸರು ನಮೂದಗಿಲ್ಲ ಎಂದರೆ ಸರಿ. ನನಗೆ ವಾದಿ ಪ್ರತಿವಾದಿಗಳ ಹೆಸರು ಗೊತ್ತಿಲ್ಲ, ಆದರೂ ಸಹ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಅವರು ಗೊತ್ತು ಎಂದು ಸುಳ್ಳು ಬರೆಯಿಸಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ.

5. ಪ್ರಸ್ತುತ ದಾವೆಯ ವಾದಿಗಳ ಹೆಸರು ಹೇಳಲು ಆಗುತ್ತದಾ ಎಂಬ ಪ್ರಶ್ನೆಗೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಮ್ಮ ವಕೀಲರ ಹೆಸರು ಆದರ್ಶ್. ದಾವಾ ಸ್ವತ್ತಿನ ಸರ್ವೇ ನಂ.88/1 ಹಾಗೂ 85/1 ಆಗಿರುತ್ತದೆ. ಒಟ್ಟು ವಿಸ್ತೀರ್ಣ 4 ಎಕರೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಸರ್ವೇ ನಂ.88/1 ರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಒಟ್ಟು ವಿಸ್ತೀರ್ಣ 4 ಎಕರೆ ಎಂದು ಮಾತ್ರ ಗೊತ್ತು. ಸರ್ವೇ ನಂ.88/1 ಹಾಗೂ 85/1 ಯಾರ ಹೆಸರಿನಲ್ಲಿವೆ ನಾನು ತಿಳಿದುಕೊಂಡಿಲ್ಲ. ಯಾರ ಹೆಸರಿನಲ್ಲಿ ಖಾತೆ ಇದೆ ಎಂದು ನನಗೆ ತಿಳಿಯದೆ ಇದ್ದರು ಸಹ ಅದು ಗೊತ್ತು ಎಂದು ನನ್ನ ಸಾಕ್ಷಿ ಪ್ರಮಾಣ ಪತ್ರ ದಲ್ಲಿ ಬರೆಯಿಸಿರುತ್ತೇನೆ ಎಂದರೆ ಸರಿ.

6. ಟಿ. ನಾರಾಯಣಸ್ವಾಮಿ ನನ್ನ ದೊಡ್ಡಪ್ಪ. ಸದರಿಯವರು ಈಗ ತೀರಿಹೋಗಿರುತ್ತಾರೆ. ಅವರಿಗೆ 4 ಹೆಣ್ಣು ಇಬ್ಬರು ಗಂಡು ಮಕ್ಕಳು. ಕೃಷ್ಣ ಅವರು ಸದರಿ ಟಿ.ನಾರಾಯಣ ಸ್ವಾಮಿ ಅವರ ಸಹೋದರ. ನನ್ನ ತಂದೆ ಕೃಷ್ಣ ಅವರಿಗೆ ನಾನೊಬ್ಬನೆ ಮಗ. ನನ್ನ ತಾಯಿ ಈಗ ಜೀವಂತವಾಗಿದ್ದಾರೆ. ನನ್ನ ತಾಯಿ ಇದ್ದರು ಸಹ ಕೃಷ್ಣ ಅವರಿಗೆ ನಾನೊಬ್ಬನೆ ವಾರಸುದಾರ ಎಂದು ನನ್ನ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುತ್ತೇನೆ ಎಂದರೆ ಸರಿ. ನನ್ನ ತಾಯಿ ಜೀವಂತವಾಗಿದ್ದರು ಸಹ ಕೃಷ್ಣ ಅವರಿಗೆ ನಾನೊಬ್ಬನೆ ವಾರಸುದಾರ ಎಂದು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

7. 1 ನೇ ವಾದಿ ನವೀನ್ ಕುಮಾರ್ ಅವರ ಪ್ರಚೋದನೆಗೆ ಬಲಿಯಾಗಿ ನಾನು, ನನ್ನ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ನನ್ನ ಸಾಕ್ಷಿ ಪ್ರಮಾಣ ಪತ್ರ ದಲ್ಲಿ ಏನು ಬರೆಯಿಸಿರುತ್ತೇನೆ ನನಗೆ ಮರೆತುಹೋಗಿದೆ. ನನ್ನ ಪ್ರತಿವಾದ ಪತ್ರದಲ್ಲಿ ಏನು ಬರೆಯಿಸಿರುತ್ತೇನೆ ಎಂದು ಪೂರ್ತಿ ಹೇಳಲು ಆಗುವುದಿಲ್ಲ. ನನ್ನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು 1 ನೇ ವಾದಿ ನವೀನ್ ಕುಮಾರ್ ಅವರ ಪ್ರಚೋದನೆ ಮೇರೆಗೆ ಸಲ್ಲಿಸಿದ್ದರಿಂದ ಅದರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

8. ನನ್ನ ತಂದೆ ಕೃಷ್ಣ ಅಕ್ಟೋಬರ್–2011 ರಲ್ಲಿ ತೀರಿಹೋಗಿರುತ್ತಾರೆ. ನನ್ನ ತಂದೆ ಕೃಷ್ಣ 20.03.1981 ರಲ್ಲಿ ರಾಮಸ್ವಾಮಿ ಅವರಿಗೆ ಒಂದು ನೊಂದಾಯಿತ ಜಿಪಿಎ

ಮಾಡಿಕೊಟ್ಟಿದ್ದರು ಎಂದರೆ ಸುಳ್ಳು. 1980 ರಲ್ಲಿ ನನಗೆ 12 ವರ್ಷ ವಯಸ್ಸಾಗಿತ್ತು. ನನಗೆ 12 ವರ್ಷ ವಯಸ್ಸಾಗಿದ್ದ ಸಮಯ ನನ್ನ ತಂದೆ ಹಾಗೂ ದೊಡ್ಡಪ್ಪ ಏನೂ ವ್ಯವಹಾರ ಮಾಡುತ್ತಿದ್ದರು ಎಂದು ನನಗೆ ಗೊತ್ತಿರಲಿಲ್ಲ ಎಂದರೆ ಅವರು ಥಿಯೇಟರ್ ನಡೆಸುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ.

9. ನನ್ನ ತಂದೆ ಹಾಗೂ ದೊಡ್ಡಪ್ಪ ಅವರಿಗೆ ಒಟ್ಟಾರೆ ಎಷ್ಟು ಜಮೀನು ಇತ್ತು ಎಂಬ ಪ್ರಶ್ನೆಗೆ ನನ್ನ ತಂದೆಗೆ ವಿಭಾಗದಲ್ಲಿ ಜಮೀನು ಬಂದಿರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಆಗ ನನ್ನ ತಂದೆಯವರಿಗೆ ಯಾವುದೇ ಜಮೀನು ಇರಲಿಲ್ಲವಾ ಎಂಬ ಪ್ರಶ್ನೆಗೆ ಅವರ ಭಾಗಕ್ಕೆ ಬಂದಿರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

10. ಪ್ರಸ್ತುತ ದಾವೆಯಲ್ಲಿ ನನ್ನ ತಂದೆ ಕೃಷ್ಣ ಅವರನ್ನು ಏತಕ್ಕೆ ಪಕ್ಷಗಾರನನ್ನಾಗಿ ಮಾಡಿದ್ದಾರೆ ನನಗೆ ಗೊತ್ತಿಲ್ಲ. ನನ್ನ ತಂದೆ ಕೃಷ್ಣ ಅವರಿಗೆ ದೊಡ್ಡಕಾಡನಹಳ್ಳಿ ಹಾಗೂ ಚಿಕ್ಕಾಡನಹಳ್ಳಿ ಗ್ರಾಮದಲ್ಲಿ ಯಾವ ಯಾವ ಸರ್ವೇ ನಂಬರ್ ಗಳ ಜಮೀನು ಯಾರ ಯಾರ ಹೆಸರಿನಲ್ಲಿದ್ದವು ಹೇಳಲು ಆಗುವುದಿಲ್ಲ. ನನಗೆ ದಾವಾ ಸ್ವತ್ತು ಸರ್ವೇ ನಂಬರ್‍ಗಳು ಹಾಗೂ ವಿಸ್ತೀರ್ಣ ಗೊತ್ತಿಲ್ಲದಿದ್ದರೂ ಸಹ, ನಾನು 1 ನೇ ವಾದಿ ಪ್ರಚೋದನೆ ಮೇರೆಗೆ ದಾವಾ ಸ್ವತ್ತುಗಳ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11. ನನ್ನ ದೊಡ್ಡಪ್ಪ ನಾರಾಯಣಸ್ವಾಮಿ ಅವರಿಗೆ ಎಷ್ಟು ಯಾವ ಜಮೀನುಗಳು ಇದ್ದವು ನನಗೆ ಗೊತ್ತಿಲ್ಲ. ಅವರಿಗೆ ಜಮೀನುಗಳು ಇದ್ದವು. ಅವರಿಗೆ ದೊಡ್ಡಕಾಡನಹಳ್ಳಿ ಗ್ರಾಮದಲ್ಲಿ ಸರ್ವೇ ನಂಬರ್ ಗಳಲ್ಲಿ ಜಮೀನುಗಳು ಇದ್ದವು ಎಂದರೆ ಸರಿ. ಸದರಿ ಜಮೀನುಗಳನ್ನು 2 ರಿಂದ 6 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ 2 ರಿಂದ 6 ನೇ ಪ್ರತಿವಾದಿಯರು ಸದರಿ ಜಮೀನುಗಳನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗಾಗಲಿ ನನ್ನ ತಂದೆಯವರಿಗಾಗಲಿ ಜಮೀನುಗಳು ಇರಲಿಲ್ಲ, ಆದರೂ ಸಹ ವಾದಿಗಳ ಪರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**12.** ನನ್ನ ತಾಯಿ ಹೆಸರು ಟಿ.ಜಯಮ್ಮ. ಸದರಿಯವರನ್ನು ಪಕ್ಷಗಾರರನ್ನಾಗಿ ಮಾಡಿದರೆ ಸತ್ಯಾಂಶ ಹೊರಗೆ ಬರುತ್ತದೆ ಎಂಬ ಉದ್ದೇಶದಿಂದ ಕೇವಲ ನನ್ನನ್ನು ಪಕ್ಷಗಾರರನ್ನಾಗಿ ಮಾಡಿ ಪ್ರಸ್ತುತ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಮರೆಮಾಚಿ ವಾದಿಗಳ ಜೊತೆ ಮೀಲಾಪಿಯಾಗಿ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲುಃ **7**ನೇ ಪ್ರತಿವಾದಿಪರ ವಕೀಲರಾದ ಶ್ರೀ ಒ.ಎಸ್.ಬಿ ಪರ ಕೆ.ಆರ್.ಎಮ್ ಅವರು **2**ರಿಂದ **6**ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು, ನೀಡಲಾಯಿತು.</u>

## ಪಾಟೀಸವಾಲುಃ ವಾದಿಪರ ವಕೀಲರಾದ ಶ್ರೀ ಎಸ್.ಎಲ್.ಜಿ. ಅವರಿಂದ–

13. ಪ್ರಸ್ತುತ ದಾವೆ ಸರ್ವೇ ನಂ.88/1 ಹಾಗೂ 85/1ಕ್ಕೆ ಸಲ್ಲಿಸಿರುತ್ತಾರೆ. ಸದರಿ ಆಸ್ತಿಗಳು ದೊಡ್ಡಕಾಡನಹಳ್ಳಿಯಲ್ಲಿ ಇವೆ. ಸದರಿ ಜಮೀನುಗಳು ಮೂಲತಃ ನನ್ನ ದೊಡ್ಡಪ್ಪನಿಗೆ ಸೇರಿದ್ದು ಎಂದು ಸಾಕ್ಷಿ ಮೊದಲು ಹೇಳಿ, ನಂತರ ಚಿಕ್ಕನಂಜಯ್ಯ ಅವರಿಗೆ ಸೇರಿದ್ದು ಎಂದು ಸಾಕ್ಷಿ ನುಡಿಯುತ್ತಾರೆ. ಚಿಕ್ಕನಂಜಯ್ಯ ಅವರಿಗೆ 3 ಜನ ಮಕ್ಕಳು.
1. ಶಿವಪ್ಪ 2. ಸ್ವಾಮಿ 3. ಸಿದ್ದಪ್ಪ ಅವರ ಹೆಸರು.

14. 1ನೇ ವಾದಿ ನವೀನ್ ಯಾರ ಮಗ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಮೂಲತಃ ವಾದಿಗೆ ಸೇರಿದ ಆಸ್ತಿ ಎಂದರೆ ಸರಿ. ದಾವಾ ಆಸ್ತಿ ಈಗ ಯಾರ ಸ್ವಾಧೀನದಲ್ಲಿದೆ ಎಂಬ ಪ್ರಶ್ನೆಗೆ ವಾದಿಗಳ ಸ್ವಾಧೀನದಲ್ಲಿದೆ ಎಂದು ಸಾಕ್ಷಿ ನುಡಿಯುತ್ತಾರೆ.

15. ಶಿವಪ್ಪ, ಸ್ವಾಮಿ ಹಾಗೂ ಸಿದ್ದಪ್ಪ ಅವರು ಟಿ. ನಾರಾಯಣ ಸ್ವಾಮಿ ಅವರ ಹೆಸರಿಗೆ ನೊಂದಾಯಿತ ಭೋಗ್ಯಪತ್ರವನ್ನು 5 ವರ್ಷಗಳ ಕಾಲಕ್ಕೆ ಮಾಡಿಕೊಟ್ಟಿರುತ್ತಾರೆ. 5 ವರ್ಷಗಳ ಕಾಲಕ್ಕೆ ಭೋಗ್ಯಪತ್ರ ಮಾಡಿಕೊಟ್ಟ ನಂತರ ಸದರಿ ಭೋಗ್ಯಪತ್ರ ಷರಾ ಬರೆದು ಖುಲಾಸೆ ಆಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ.

16. ನನ್ನ ತಂದೆ ಸದರಿ ಜಮೀನುಗಳನ್ನು ಮಾರಾಟ ಮಾಡಿಲ್ಲ. ನನಗೆ ದಾವಾ ಸ್ವತ್ತುಗಳ ಮೇಲೆ ಯಾವುದೇ ಹಕ್ಕು ಇಲ್ಲ.

**ಮುಂದುವರಿದ ಪಾಟೀಸವಾಲುಃ ಈ ಹಂತದಲ್ಲಿ 2 ರಿಂದ 6 ನೇ ಪ್ರತಿವಾದಿಪರ ವಕೀಲರಾದ ಶ್ರೀ ಬಿ.ಎಸ್.ವೈ. ಅವರು ಸಾಕ್ಷಿಗೆ ಇನ್ನೂ ಪ್ರಶ್ನೆ ಕೇಳುವುದಾಗಿ ಅನುಮತಿ ಕೋರಿದ್ದು, ನೀಡಲಾಯಿತು.**

17. ನಮ್ಮ ತಂದೆಗೆ ಚಿಕ್ಕಾಡನಹಳ್ಳಿ ಹಾಗಾ ದೊಡ್ಡಕಾಡನಹಳ್ಳಿಯಲ್ಲಿ ಯಾವುದೇ ಜಮೀನು ನೀಡಿಲ್ಲ ಎಂದು ಈ ಮೊದಲು ನಾನು ನುಡಿದಿದ್ದು, ಆದ್ದರಿಂದ ಯಾವ ಸರ್ವೇ ನಂಬರ್ ನಲ್ಲಿ ಯಾರು ಸ್ವಾಧೀನದಲ್ಲಿದ್ದಾರೆ ನನಗ ಹೇಳಲು ಆಗುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಚೆಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ನನಗೆ ದಾವಾ ಜಮೀನು ಎಲ್ಲಿದೆ ಗೊತ್ತಿಲ್ಲ, ಯಾವ ವಿಚಾರವು ನನಗೆ ಗೊತ್ತಿಲ್ಲ ಆದರೂ ಸಹ ವಾದಿಯ ಪ್ರಚೋದನೆ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಪರ ವಕೀಲರು ಪ್ರಶ್ನೆ ಮಾಡಿದಾಗ ಈ ಬಗ್ಗೆ ಉತ್ತರ ನೀಡಿದ್ದು, ನಾನು ಕೇಳಿದಾಗ ಈ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಿದ್ದು, ಯಾವ ವಿಚಾರ ಸರಿ ಎಂಬ ಪ್ರಶ್ನೆಗೆ ನೀವು ಪ್ರಶ್ನೆ ಮಾಡಿದಾಗ ನಾನು ನೀಡಿರುವ ಉತ್ತರಗಳು ಸತ್ಯವಾಗಿವೆ ಎಂದು ಸಾಕ್ಷಿ ನುಡಿಯುತ್ತಾರೆ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.